ಕುರ್ತಾ, ಪೈಜಾಮ ಧರಿಸಿದ್ದರು. ಅನೇಕ ವರ್ಷಗಳಿಂದ ನಿರಂಜನರು ಪಂಚಾಕ್ಷರಿಯವರು ಆಪ್ತ ಸ್ನೇಹಿತರಾಗಿದ್ದರು. ಅಜಮಾಸು 30–35ರಷ್ಟು ವಯಸ್ಸಾಗಿದ್ದ ನಿರಂಜನರು 'ಸಾಹಿತ್ಯದಲ್ಲಿ ವಾಸ್ತವತೆ' ವಿಷಯವನ್ನು ಕುರಿತು ಸುಮಾರು 40 ನಿಮಿಷ ಮಾತಾಡಿದರು. ಮುಖದಲ್ಲಿ ಸದಾ ಮುಗುಳುನಗೆ, ಮಾತಿನಲ್ಲಿ ಉಂಡ ಅನುಭವಗಳ ಆಧಾರದಲ್ಲಿಯೇ ನೀಡುತ್ತಿದ್ದ ಉದಾಹರಣೆಗಳು, ನಿಧಾನ ಆದರೆ ನಿರರ್ಗಳ ಮಾತು. 'ಭಾರತದ ವಿವಿಧ ಸಾಹಿತಿಗಳು ಜೀವನದ ಕಟು ಅನುಭವಗಳನ್ನು ಆಧರಿಸಿ ಸಾಹಿತ್ಯ ರಚಿಸುತ್ತಿದ್ದಾರೆ, ಸಾಹಿತ್ಯ ನಿಂತ ನೀರಾಗಬಾರದು, ನಮ್ಮ ಅನುಭವಗಳ ಅಡಿಗಲ್ಲಿನ ಮೇಲೆ ರಚಿಸಿದ ಸಾಹಿತ್ಯ ಮುಂದಿನ ಪೀಳಿಗೆಗಳ ನೋವು, ಆತಂಕಗಳನ್ನು ನಿವಾರಿಸುವ ಔಷಧದಂತೆ ಕೆಲಸ ಮಾಡಬೇಕು, ನಾವು ಕಂಡ ಸಾಮಾಜಿಕ ನೋವುಗಳನ್ನು ಸಾಹಿತಿಗಳು ಮಾತ್ರ ಚಿತ್ರಿಸಬಲ್ಲರು, ತಿದ್ದಬಲ್ಲರು; ರಾಜಕಾರಣಿಗಳಿಗೆ ಆ ಸಾಮರ್ಥ್ಯ ಇರುವುದಿಲ್ಲ. ನಾವು ಸಾಹಿತಿಗಳು ನಮ್ಮ ಅನುಭವಗಳಿಗೆ ಗುಲಾಮರೇ ಹೊರತು ಭೋಗದ, ವಿಲಾಸದ ಇತರ ಸಾಧನಗಳಿಗೆ ಅಲ್ಲ. ಈ ದೃಷ್ಟಿಯಿಂದ ಭಾರತೀಯರೆಲ್ಲರೂ ಸಮಾನರು, ಒಂದು ಪರಿವಾರದವರು. ಭಾಷೆಗಳು, ಪರಿಸ್ಥಿತಿಗಳು ಬೇರೆ ಬೇರೆಯಾಗಿರಬಹುದು, ಆದರೆ ನಮ್ಮ ಮೂಲಭೂತ ಭಾವನೆಗಳು ಎಲ್ಲ ಕಾಲದಲ್ಲಿಯೂ ಒಂದೇ ಪ್ರಕಾರದವಾಗಿರುತ್ತವೆ' ಎಂದರು.

ಕಾರ್ಯಕ್ರಮ ಮುಗಿದ ಬಳಿಕ ಅವರೆಲ್ಲ ಚಹಾ ಸೇವನೆಗೆ ತೆರಳುವ ಮುನ್ನ, ದಾರಿಯಲ್ಲಿ ಪಂಚಾಕ್ಷರಿಯವರು ನಿರಂಜನರಿಗೆ ನನ್ನ ಪರಿಚಯ ಮಾಡಿಸಿದರು. ನಿರಂಜನರ ಪತ್ನಿ ಪ್ರಸೂತಿ ತಜ್ಞ ವೈದ್ಯರು, ಮೈಸೂರು ಮೆಡಿಕಲ್ ಕಾಲೇಜಿನಿಂದ ಪದವಿ ಪಡೆದವರು, ಈಗ ಧಾರವಾಡದಲ್ಲಿ ನೆಲೆಸಿ ಅವರ ಆಸ್ಪತ್ರೆ ಆರಂಭಿಸಲು ನಿರ್ಧರಿಸಿದ್ದಾರೆ ಎಂದು ಹೇಳಿದರು. ಸದ್ಯ ತಾವು ಧಾರವಾಡದಲ್ಲಿ ಅವರಿಗಾಗಿ ಒಂದು ಮನೆಯನ್ನು ಹುಡುಕುತ್ತಿರುವುದಾಗಿ ಹೇಳಿದರು.

## 3

ಪ್ರಥಮ ವರ್ಷದ ಪರೀಕ್ಷೆ ಮುಗಿದ ಕೂಡಲೇ ರಜೆಯಲ್ಲಿ ಮತ್ತೆ ಓದಿನ ಬೆನ್ನು ಬಿದ್ದೆ. ಪಂಚಾಕ್ಷರಿಯವರು ಕೊಟ್ಟ ನಿರಂಜನರ ಕಾದಂಬರಿ 'ದೂರದ ನಕ್ಷತ್ರ' ಓದಿದೆ. 'ಅಂಕುಶ' ಪತ್ರಿಕೆಯ ಸಂಪಾದಕರಾಗಿದ್ದ, ಮುಕ್ತ ಚಿಂತಕ ಗ.ಶಿ. ಹುರಳಿಯವರ ಜೊತೆ ಅನೇಕ ಸಾಹಿತಿಗಳ ಕೃತಿಗಳ ಬಗ್ಗೆ ಚರ್ಚಿಸಿದೆ. ಒಂದು ರೀತಿಯಲ್ಲಿ ಅಂದು ನಿರಂಜನರು ಹೇಳಿದ್ದುದನ್ನೇ ಮತ್ತೊಂದು ರೀತಿಯಲ್ಲಿ ಹುರಳಿಯವರು ಬೋಧಿಸುತ್ತಿದ್ದಾರೆ ಅನ್ನಿಸಿತು. 'ಗರಿ', 'ನಾದಲೀಲೆ' (ಬೇಂದ್ರೆ), 'ಕುಸುಮಸಂಕೋಲೆ' (ಸೂ. ವೆಂ. ಆರಗ), 'ಸರ್ಪಮತ್ಸರ' (ತರಾಸು), 'ಸಾಕ್ಷಾತ್ಕಾರ', 'ಗಿರಿಯ ನವಿಲು', 'ಆಶ್ರಮವಾಸಿ' (ಬಕ), 'ಪುರುಷಾಮೃಗ' (ಆನಂದರ ಅನುವಾದ), ಭಗವತೀಚರಣ ವರ್ಮಾ ಅವರ ಎರಡು ಹಿಂದೀ ಕಾದಂಬರಿ, ಪ್ರೇಮ್‌ಚಂದ್, ಶರತ್‌ಚಂದ್ರರ ಕಾದಂಬರಿಗಳನ್ನು

ದಕ್ಷಿಣ ಕನ್ನಡದ ಕುಳಕುಂದ ಶಿವರಾಯರು ಕನ್ನಡ ಸಾಹಿತ್ಯಲೋಕದಲ್ಲಿ ನಿರಂಜನರೆಂದು ಪ್ರಸಿದ್ಧರು. ಇಪ್ಪತ್ತನೇ ಶತಮಾನದ ಪ್ರಮುಖ ಕನ್ನಡ ಬರಹಗಾರರಲ್ಲೊಬ್ಬರಾದ ನಿರಂಜನರದು, ಪ್ರಗತಿಶೀಲ ಚಳವಳಿಯಲ್ಲಿ ಪ್ರಮುಖ ಹೆಸರು. 'ಚಿರಸ್ಮರಣೆ', 'ಮೃತ್ಯುಂಜಯ', 'ರಂಗಮ್ಮನ ವಠಾರ', ವಿಮೋಚನೆ', 'ಬನಶಂಕರಿ', 'ಏಕಾಂಗಿನಿ' ಹಾಗೂ 'ಸ್ವಾಮಿ ಅಪರಂಪಾರ' ನಿರಂಜನರ ಕೆಲವು ಪ್ರಮುಖ ಕಾದಂಬರಿಗಳು. 'ಕೊನೆಯ ಗಿರಾಕಿ' ಅವರ ಪ್ರಸಿದ್ಧ ಕಥಾಸಂಕಲನ. ಅಂಕಣಕಾರರಾಗಿ, ವಿಮರ್ಶಕರಾಗಿಯೂ ನಿರಂಜನ ಜನಪ್ರಿಯರಾಗಿದ್ದವರು. ಕಿರಿಯರ ವಿಶ್ವಕೋಶ 'ಜ್ಞಾನ ಗಂಗೋತ್ರಿ'ಯ ಏಳು ಸಂಪುಟಗಳು ಹಾಗೂ 'ವಿಶ್ವ ಕಥಾಕೋಶ'ದ ಇಪ್ಪತ್ತೈದು ಸಂಪುಟಗಳು ನಿರಂಜನರು ರೂಪಿಸಿದ ಮಹತ್ವದ ಕೃತಿಗಳು.